ಸರ್ಕಾರದೊಡನೆ ಪ್ರಸ್ತಾಪ ಮಾಡಿದ್ದಾರೆಯೇ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಅಭಿಪ್ರಾಯವನ್ನು ಸದನಕ್ಕೆ ಕೊಡಬೇಕು ಎಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಶ್ರೀ. ಹೆಚ್. ಡಿ. ದೇವೇಗೌಡ—ಆರೀತಿ ಯಾವುದೇ ಪ್ರಪೊಸಲ್ ನಮ್ಮ ಮುಂದೆ ಬಂದಿಲ್ಲ. ನಮಗೆ ಅದರ ವಿಷಯ ಗೊತ್ತಿಲ್ಲ. ಒಂದುವೇಳೆ ಅಂಥಾದ್ದು ಇದ್ದರೆ ಸರ್ಕಾರದ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ.

ವಿಷಯ.—ನಂಜನಗೂಡು ಕ್ಷೇತ್ರದಲ್ಲಿ ಕಾಡಾನೆಗಳ ಹಾವಳಿ

ಶ್ರೀ ಎಂ. ಮಹದೇವ್.—ನನ್ನ ಕ್ಷೇತ್ರದಲ್ಲಿ ಆನೆಗಳ ಕಾಟ ಜಾಸ್ತಿಯಾಗಿದೆ. ದಿನಾಂಕ ೨೯-೧೧-೧೯೮೩ರಲ್ಲಿ ಒಬ್ಬ ಸತ್ತಿದ್ದಾನೆ. ಸರ್ಕಾರ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ವಿಷಯವನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ ಮತ್ತು ಪತ್ರಿಕಾ ಹೇಳಿಕೆಯನ್ನೂ ಕೊಟ್ಟಿದ್ದೇನೆ. ಮಾನ್ಯ ಅರಣ್ಯ ಸಚಿವರು, ಅರಣ್ಯ ಇಲಾಖೆಯವರು ಇದರ ಬಗ್ಗೆ ಏನೂ ಕ್ರಮ ತೆಗೆದು ಕೊಂಡಿಲ್ಲ.

ಅಧ್ಯಕ್ಷರು.—ಸದನದಲ್ಲಿ ನೀವು ಏನಾದರೂ ಹೇಳಬೇಕಾದರೆ, ಅವಕಾಶ ಬೇಕಾದರೆ ಅದಕ್ಕೆ ಕೆಲವು ನಿಯಮಗಳಿವೆ. I cannot allow this to go on.

ಶ್ರೀ ಎಂ. ಮಹದೇವ್.—ಅವಕಾಶಕೊಡಿ.

ಅಧ್ಯಕ್ಷರು.—ಎಲ್ಲಾ ಅವಕಾಶ ನಿಮ್ಮೊಬ್ಬರಿಗೇ ಕೊಡಬೇಕು ಅಂದರೆ ಮುಂದಿನಸಾರಿ ಮಾಡೋಣ.

ಶ್ರೀ ಎಂ. ಮಹದೇವ್—ನಾವು ಕ್ಷೇತ್ರಕ್ಕೆ ಹೋಗುವುದಕ್ಕೆ ಆಗಂತ್ತಾ ಇಲ್ಲ. ಮತ್ತೆ ಅವಕಾಶ ಕೊಡಿ, ನಾನು ಕಾಳಿತುಕೊಳ್ಳುತ್ತೇನೆ, ದಯವಿಟ್ಟು ಇನ್ನೊಂದು ಅವಕಾಶಕೊಡಿ.

Mr. Speaker.—There cannot be two matters under Rule 334 at the same time. I cannot tolerate this kind of indiscipline.

ಶ್ರೀ ಎಂ. ಮಹದೇವ್.—ಸರ್ಕಾರ ಅದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿಲ್ಲ. ಏನು ಮಾಡಬೇಕು ಅಧ್ಯಕ್ಷರೆ, ತಾವೇ ಹೇಳಿ. ಇದು ಮಂಡಿಸ್ಪವಾದ ವಿಚಾರವಲ್ಲವೇ? ಆನೆಗಳು ಒಬ್ಬೊಬ್ಬರ ಪ್ರಾಣವನ್ನು ತೆಗೆಯುತ್ತಾ ಇವೆ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲದೇ ಹೋದರೆ ಹೇಗೆ? ದಯವಿಟ್ಟು ತಾವು ನಮಗೆ ಅವಕಾಶಕೊಡಿ ಇಲ್ಲವೇ ಅವರಿಂದ ಉತ್ತರ ಹೇಳಿಸಿ.

Mr. Speaker —You cannot defy the Chair like this.

Sri. M. Mahadev.—Please allow me to.

Mr. Speaker.—This will not go the records.

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ದಯವಿಟ್ಟು ನಮ್ಮ ಕಷ್ಟವೇನಿದೇ ಎಂಬುದನ್ನು ದಯವಿಟ್ಟು ಕೇಳಿ.

ಅಧ್ಯಕ್ಷರು.—೩ಷಿಳರ ಕೆಳಗೆ ನೋಟೀಸ್ ಏನು ಬಂದಿವೆ ಅವುಗಳನ್ನು ಆರ್ಡರ್ ಪ್ರಕಾರವಾಗಿ ಕರೆಯುತ್ತೇನೆ, ಆದರೆ ಸದಸ್ಯರು ನನಗೆ ಅಡ್ಡಿ ಬಂದು ಹೀಗೆ ಮಾತನಾಡುವುದಾದರೆ ಈ ಸದನದಲ್ಲಿ ಆ ರೀತಿಯಾಗಿ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಎಂ. ಮಹದೇವ್.—ನಾನು ಕೊಟ್ಟರತಕ್ಕ ನೋಟೀಸ್‌ನಲ್ಲಿ ಎ ಆಂಡ್ ಬಿ ಎಂದು ಕೊಟ್ಟಿದ್ದೇನೆ.

ಅಧ್ಯಕ್ಷರು.—ಹಾಗೆ ಕೊಟ್ಟರೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಹದೇವ್.—ಈಗ ಅವಕಾಶ ಮಾಡಿಕೊಡಿ.

MR. SPEAKER.—Mr. Mahadev Please resume your seat. His speech should not go into records.

* * * * *

ಶ್ರೀ ಎಂ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದಂ ಬಹಳ ಜಾಸ್ತಿಯಾಯಿತು ತಾವು ಬಹಳ ಸಹಾನುಭೂತಿಯಿಂದ ಈಗ ಮಾತನಾಡಲು ಅವಕಾಶವಿಲ್ಲವೆಂದು ಪದೇ ಪದೇ ಹೇಳುತ್ತಿದ್ದರೂ ಸಹ ಮಾನ್ಯ ಸದಸ್ಯರು ಸಭೆಯ ಕಾರ್ಯಕಲಾಪಕ್ಕೆ ಅಡ್ಡಿ ಪಡಿಸುತ್ತಿದ್ದಾರೆ.

ಶ್ರೀ ಎಂ. ಮಹದೇವ್.—ಹಳ್ಳಿಗಳಲ್ಲಿರತಕ್ಕ ಕಷ್ಟ ನಿವಂಗೇನು ಗೊತ್ತಾಗುತ್ತದೆ! ಆನೆಗಳಂ ದಿನ ಕ್ಕೊಬ್ಬರ ಬಲಿಯನ್ನು ತೆಗೆದುಕೊಳ್ಳುತ್ತಿದೆ.

MR. SPEAKER.—It should not go into records. I have called the hon. Member Sri Kharge.

* * * * *

ಶ್ರೀ ಎಂ. ಮಹದೇವ್.—ದಯವಿಟ್ಟು ನನಗೆ ಅವಕಾಶ ಮಾಡಿಕೊಡಿ.

MR SPEAKER.—By shouting you cannot make any point. Please resume your seat.

ಶ್ರೀ ಎಂ. ಮಹದೇವ್.—ಬಹಳ ಅರ್ಜೆಂನ್ಸಿ ಇದೆ, ಆದುದರಿಂದ ಈ ಸದನವು ಮುಂಗಿಯಾವುದ ರೊಳಗಾಗಿಯಾದರೂ ತಾವು ನನಗೆ ಅವಕಾಶ ಮಾಡಿಕೊಡಿ.

MR. SPEAKER.—Mr. Mahadev, there is a limit for all these. I have called the next Member. Please resume your seat.

ಶ್ರೀ ಬಿ. ಮೈಕಲ್ ಫರ್ನಾಂಡೀಸ್.—ತಾವು ಮಹಾದೇವ್‌ರವರನ್ನೇ ಕಂಟ್ರೋಲ್ ಮಾಡಂ ವುದಕ್ಕೆ ಆಗದಿದ್ದರೆ ಸರ್ಕಾರದವರು ಕಾಡು ಆನೆಗಳನ್ನು ಹೇಗೆ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯ ವಾಗುತ್ತದೆ ?

ಶ್ರೀ ಎಂ. ಮಹದೇವ್.—ನನ್ನ ಕ್ಷೇತ್ರದಲ್ಲಿ ನಾನು ಪ್ರವಾಸ ಮಾಡುವುದಕ್ಕೆ ಬಹಳ ಕಷ್ಟವಿದೆ, ಅಲ್ಲಿಯ ಜನಗಳಿಗೆ ಪ್ರಾಣದ ಭಯವಿದೆ.

MR. SPEAKER.—I shall not allow this indiscipline.

ಶ್ರೀ ಎಂ. ಮಹದೇವ್.—ಆನೆ ತುಳಿದಂದರಿಂದ ಸತ್ತ ಮನುಷ್ಯನನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. Please obey me. please sit down first and then I will consider your request.

ಶ್ರೀ ಎಂ. ಮಹದೇವ್.—ನಿಮ್ಮ ಬಗ್ಗೆ ಗೌರವವಿದೆ, ನನ್ನ ಕಷ್ಟವನ್ನು ಮನವರಿಕೆ ಮಾಡಿ ಕೊಳ್ಳಿ.

MR. SPEAKER.—Mr. Mahadev do not create problem. Are you going to resume your seat or not ?

ಶ್ರೀ ಎಂ. ಮಹದೇವ್.—ಈ ಸದನ ಮುಂಗಿಯುವುದರೊಳಗಾಗಿ ಅವಕಾಶ ಕೊಡುತ್ತೀನೆಂದು ಭರವಸೆ ಕೊಡುತ್ತೀರಾ ? ನನ್ನ ಕ್ಷೇತ್ರದ ಜನರ ಹಿತದೃಷ್ಟಿಯಿಂದ ನಾನು ತಮ್ಮಲ್ಲಿ ಕೈ ಮುಂಗಿದು ಕೇಳಿಕೊಳ್ಳುತ್ತಿದ್ದೇನೆ. ಇದು ಬಹಳ ಮಹತ್ವದ ವಿಚಾರವಾಗಿದೆ.

---

* not recorded as ordered by the Chair.

ಅಧ್ಯಕ್ಷರು.—ನೀವು ವಿಯಮದ ಪ್ರಕಾರವಾಗಿ ನಡೆದುಕೊಳ್ಳದಿದ್ದರೆ ಕಾನೂನು ಪ್ರಕಾರವಾಗಿ ಕ್ರಮವನ್ನು ಕೈಕೊಳ್ಳಬೇಕಾಗುತ್ತದೆ. ಸಿಸಿಲರ ಕೆಳಗೆ ಅನೇಕ ಜನ ಪ್ರಶ್ನೆಗಳನ್ನು ಕಳುಹಿಸಿದ್ದಾರೆ. ಆ ಮೇಲೆ ನೋಡೋಣ ಕುಳಿತುಕೊಳ್ಳಿ, ಶ್ರೀ ಮಲ್ಲಿಕಾರ್ಜುನ ಖಾರ್ಗೆಯವರೇ ನೀವು ಪ್ರಸ್ತಾಪ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಸಿಸಿಲರ ಕೆಳಗೆ ಕೊಟ್ಟಿರತಕ್ಕ ವಿಷಯದ ಬಗ್ಗೆ ಹಿಂದೆ ಕೂಡ ಒಂದೆರಡು ಸಲ ಪ್ರಸ್ತಾಪ ಮಾಡಿ ಹೇಳಿದ್ದೇನೆ. ಇವತ್ತು ಈ ಸರ್ಕಾರಕ್ಕೆ ಹೊಸ ಕೆಲಸವನ್ನು ಮಾಡತಕ್ಕ ಶಕ್ತಿ ಇದೆಯೋ ಇಲ್ಲವೊ ಗೊತ್ತಿಲ್ಲ. ಆದರೆ ಹಿಂದೆ ಮಂಜೂರು ಮಾಡಿದಂಥ ಕೆಲಸಗಳನ್ನು ಅಂದರೆ ಹೊಸದಾಗಿ ಆಸ್ಪತ್ರೆ ಕಟ್ಟುವುದಾಗಲೀ, ಶಾಲೆಗಳನ್ನು ಕಟ್ಟುವುದಾಗಲೀ ಇವೆಲ್ಲವುಗಳನ್ನು ಸಹ ಒಂದು ಊರಿಗೆ ಮಂಜೂರು ಆಗಿದ್ದರೆ ಮಂತ್ರೊಂದು ಊರಿಗೆ ವರ್ಗಾವಣೆ ಮಾಡುತ್ತಿದ್ದಾರೆ. ಹೋದ ಸಲ ಈ ಸದನದಲ್ಲಿ ಹೈಸ್ಕೂಲಿನ ಬಗ್ಗೆ ಪ್ರಸ್ತಾಪ ಮಾಡಿದ್ದೆ ಆಗ ಮಾನ್ಯ ಶ್ರೀ ರಾಚಯ್ಯನವರು ಅದನ್ನು ಸರಿಪಡಿಸಿದರು. ಮಾನ್ಯ ವಿಶ್ವನಾಥ್ ಮುದ್ನಾಳ್‌ರವರು ಮಂತ್ರಿಯಾಗಿದ್ದಾರೆ ಅವರೂ ನಮ್ಮ ಕ್ಷೇತ್ರದವರೇ ಆಗಿದ್ದಾರೆ ಅವರು ಮನಸ್ಸು ಮಾಡಿದರೆ ಹೊಸದಾಗಿ ಒಂದು ವೆಟರ್ನರಿ ಆಸ್ಪತ್ರೆ ತೆಗೆದುಕೊಳ್ಳಬಹುದಾಗಿತ್ತು, ಹೆಲ್ತ್ ಸೆಂಟರ್‌ನ್ನು ತೆಗೆದುಕೊಳ್ಳಬಹುದಾಗಿತ್ತು, ಆದರೆ ಒಂದು ಊರಿಗೆ ಮಂಜೂರು ಆಗಿದ್ದನ್ನು ಮತ್ತೊಂದು ಊರಿಗೆ ಕೊಡುತ್ತಿದ್ದಾರೆ. ಇದು ರಿಕಾರ್ಡ್‌ನಲ್ಲಿ ಯಾದರೂ ಹೋಗಲಿ ಎಂದು ಹೇಳುತ್ತಿದ್ದೇನೆ. ಸಂಬಂಧಪಟ್ಟ ಮಂತ್ರಿಗಳವರು ನಮ್ಮ ಜಿಲ್ಲೆಯ ಮಂತ್ರಿಗಳೇ ಆಗಿದ್ದಾರೆ ಆದರೆ ದುರ್ದೈವ ಅವರು ಹೊಸದಾಗಿ ಯಾವುದೇ ಯೋಜನೆಗಳನ್ನು ಮಂಜೂರು ಮಾಡುತ್ತಿಲ್ಲ. ಅವರು ನಮ್ಮ ತಾಲ್ಲೂಕಿನಿಂದ ಬಂದಂತಹ ಮಂತ್ರಿಗಳು, ಹೊಸದಾಗಿ ಕೆಲಸಗಳನ್ನು ಮಂಜೂರು ಮಾಡಿಸಿಕೊಂಡು ಬೇಕಾದಷ್ಟು ಅವರ ಕ್ಷೇತ್ರದಲ್ಲಿ ಕೆಲಸಗಳನ್ನು ಮಾಡಿಸಿಕೊಳ್ಳಲಿ ನನ್ನ ಕ್ಷೇತ್ರದಲ್ಲಿರತಕ್ಕ ಮುದ್ನಾಳ್ ಹಳ್ಳಿಯಲ್ಲಿ ಕಳೆದ ೪ ವರ್ಷಗಳಿಂದಲೂ ಇದ್ದಂಥ ಪಶು ವೈದ್ಯ ಶಾಲೆಯನ್ನು ಜನತಾ ಪಕ್ಷದ ಅಧ್ಯಕ್ಷರಾದ ಸಭಾಪತಿಯವರ್ಡಿ ಕಲ್ಯಾಣರಾವರವರ ಹಳ್ಳಿಗೆ ಬದಲಾಯಿಸಿದ್ದಾರೆ. ೫ ಕಿಲೋಮೀಟರ್‌ನಲ್ಲಿ ಇದ್ದಂಥ ಹೆಲ್ತ್ ಯೂನಿಟ್‌ನ್ನು ಹತ್ತಿಗುಣಿಯಿಂದ ಕಂದಕೂರಿಗೆ ಮಾಡಿಸಿಕೊಂಡಿದ್ದಾರೆ. ಅದೇ ರೀತಿ ಯೆಲೇರ್ ಹೈಸ್ಕೂಲನ್ನು ಶಿಫ್ಟ್ ಮಾಡಿದ್ದರು. ಅದನ್ನು ಬಿ. ರಾಚಯ್ಯನವರಿಗೆ ತಿಳಿಸಿದ ಮೇಲೆ ಸರಿಪಡಿಸಿದ್ದಾರೆ. ಸರ್ಕಾರದವರು ಹೊಸದು ಕೊಡುವುದಿಲ್ಲ. ಹಿಂದೆ ಮಂಜೂರು ಮಾಡಿದವುಗಳನ್ನು ಶಿಫ್ಟ್ ಮಾಡುವುದಂ ಏತಕ್ಕೆ ಇದರಿಂದ ಜನರು ರೊಚ್ಚಿಗೇಳುವಂಥ ಸಂಭವ ಇದೆ. ಆರ್.ಇ.ಸಿ. ಪ್ರೋಗ್ರಾಂನಲ್ಲಿ ಒಳಪಟ್ಟಂತಹ ಹಳ್ಳಿಗಳನ್ನು ಕೂಡ ಬದಲಾಯಿಸಿ, ವಾಸ್ತ ಮಂತ್ರಿಗಳು ತಾವು ಹೇಳಿದ ಹಳ್ಳಿಗಳಿಗೆ ವಿದ್ಯುತ್ ಒದಗಿಸಬೇಕೆಂದು ಹೇಳಿದ್ದಾರೆ. ಅಧಿಕಾರಿಗಳನ್ನು ಎದುರಿಸಿ, ಬೆದರಿಸಿ ಈ ಕೆಲಸ ಮಾಡಿಸಂತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ, ಸಿಸಿಲರ ವ್ಯಾಪ್ತಿಯಲ್ಲಿ ಇದು ಚರ್ಚೆಗೆ ವಸ್ತುವಾಗುವ ಹಾಗೆ ಕಾಣುವುದಿಲ್ಲ. ತಾವು ಮಂತ್ರಿಗಳ ಮೇಲೆ ಆಪಾದನೆ ಮಾಡುತ್ತಿದ್ದೀರಿ.

ಶ್ರೀ ಎಂ. ಖಾರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ವಿಷಯವನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಮಂತ್ರಿಯವರಿಗೆ ತಿಳಿಸಲಿ. ಇಲ್ಲದೇ ಹೋದರೆ ಸ್ಥಳೀಯ ಜನರು ನಮ್ಮ ಊರಿಗೆ ಮಂಜೂರಾಗಿದ್ದ ಆಸ್ಪತ್ರೆಯನ್ನು ಏತಕ್ಕೆ ವರ್ಗ ಮಾಡುತ್ತೀರೆಂದು ಡಿ.ಸಿ.ಎ.ಸಿ. ಹಾಗೂ ತಹಶೀಲ್ದಾರ್ ರವರ ಕಛೇರಿಗಳಿಗೆ ಮುತ್ತಿಗೆ ಹಾಕಿದರೆ ಫರ್ಮಣೆ ಆಗಂತ್ತದೆ.

ಶ್ರಿ ಎ. ಲಕ್ಷ್ಮೀಸಾಗರ್.—ಸ್ವಾಮಿ, ಅವರಂ ೧೦-೨೦ಕ್ಕೆ ನೋಟೀಸ್ ಕೊಟ್ಟಿದ್ದಾರೆ. ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಯವರು ಹಾಗೂ ದೇವೇಗೌಡರು ಸಾದಗಾರ್ ಅಣೆಕಟ್ಟನ್ನು ರಾಷ್ಟ್ರಕ್ಕೆ ಅರ್ಪಿಸುವುದಕ್ಕೆ ಬಂದಾಗ ನಾನು ನನ್ನ ಬಹಿರಂಗ ಭಾಷಣದಲ್ಲಿ ಹೇಳಿದ್ದೇನೆ. ಸರಿಪಡಿಸುತ್ತೇವೆಂದು ಹೇಳಿ ನಾಲ್ಕು ತಿಂಗಳು ಕಳೆದರೂ ಇನ್ನೂ ಆಗಿಲ್ಲ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಯವರು ವೀರಪ್ಪಮೊಯ್ಲಿಯವರಿಗೆ ಬುದ್ಧಿ ಸರಿಯಿಲ್ಲ ಎನ್ನುವ ಹೇಳಿಕೆ ಕೊಟ್ಟಿದ್ದಾರೆ. ಇವರ ಮಂತ್ರಿಗಳು ಹುಚ್ಚರಾಗಿದ್ದರೋ ಏನೋ, ಹುಚ್ಚರ ಆಸ್ಪತ್ರೆಗೆ ಸೇರಿಸಿ. ಇವರಿಗೆ ತಾಕತ್ತು ಇದ್ದರೆ ಬೇರೆ ಮಂಜೂರು ಮಾಡಿಸಿಕೊಳ್ಳಲಿ, ಮಂಜೂರಾಗಿರುವಂಥ ಕೆಲಸಗಳನ್ನು ಬೇರೆ ಮಾಡುವುದು ಬಿಡಲಿ. ಇಲ್ಲದೇ ಹೋದರೆ ಇದನ್ನು ನಾವು ಪ್ರೊಟೆಸ್ಟ್ ಮಾಡ ಬೇಕಾಗಂತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಮಂಚ್ಚದಹಳ್ಳಿ. ಕಂದಕೂರಿಗೆ ಆಸ್ಪತ್ರೆ ಬದಲಾಯಿಸಿರುವುದನ್ನು ಹೇಳಿದ್ದಾರೆ. ಇದರಿಂದ ಜನರಿಗೆ ತೊಂದರೆಯಾಗಿದೆಯೆಂದು ಹೇಳಲಿ ಅದಕ್ಕೆ ರಾಜಕೀಯ ಬೆರಸಿ ಇವರಿಗೆ ತಲೆ ಕೆಟ್ಟು ಹೋಗಿದೆಯೆಂದು ಏತಕ್ಕೆ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರಾಜಕೀಯ ಮಾಡುವವರು ನೀವು.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ನಡೆದಿದ್ದನ್ನು ಹೇಳುತ್ತಿದ್ದೇನೆ. ಅವರು ಹೇಳಿದನ್ನು ನಾವು ಕೇಳಬೇಕು. ನಾವು ಹೇಳುವುದನ್ನು ಅವರು ಕೇಳುವಂಥ ಸೌಜನ್ಯ ಇಲ್ಲದೇ ಇದ್ದರೆ ಹೇಗೆ ?

ಶ್ರೀ ಎಂ. ಮಹದೇವ್.—ಸ್ವಾಮಿ, ನಮಗೆ ಮಾನ್ಯ ಸಾಗರ್‌ರವರ ಉತ್ತರ ಬೇಡ.

ಅಧ್ಯಕ್ಷರು—ಮಹದೇವ್‌ರವರೇ ನಿಮ್ಮಷ್ಟು ಸರ್ವಜ್ಞರು ಅಲ್ಲದೇ ಇರಬಹುದು, ಅವರು ಹೇಳುವುದನ್ನು ಕೇಳೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮಂತ್ರಿಗಳಿಗೆ ತಿಳಿಸುತ್ತೇನೆ. ಮಾನ್ಯ ಸದಸ್ಯರು ತಪ್ಪು ತಿಳಿದು ಕೊಳ್ಳದೇ ಹೋದರೆ ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ಪರಿಹಾರ ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಮಾಡಿರುವುದನ್ನು ಮೊದಲು ಕ್ಯಾನ್ಸಲ್ ಮಾಡಿ. This is a case which I have brought to your notice. Before four months I openly told the Chief Minister and also to Sri Deve Gowda I have also given in writing to Health Minister Sri Sindhya stating that such and such hospital has been shifted from my constituency to Sri Vishwanath Reddy's constituency. ಇದು ಆಗಬಾರದು. ತಕ್ಷಣ ರಿಟೈನು ಮಾಡುತ್ತೇವೆಂದು ಹೇಳಿದರೂ ಇದುವರೆಗೆ ಆಗಿಲ್ಲ. ಇದೇ ರೀತಿ ಇನ್ನೂ ಮೂರು ನಾಲ್ಕು ಕೇಸ್‌ಗಳು ಇವೆ, ಚುನಾವಣೆಯಲ್ಲಿ ನನಗೆ ತೊಂದರೆ ಕೊಡಿ, ನಾನು ಎದುರಿಸುತ್ತೇನೆ, ಜನರಿಗೆ ಏತಕ್ಕೆ ತೊಂದರೆ ಕೊಡಬೇಕು.

MR. SPEAKER.—You have just now said it.

SRI M. MALLIKARJUN KHARGE.—All the cases are like this. He is interfering every day.

4. ಸರ್ಕಾರಿ ನಿರ್ಣಯ

ವಿದ್ಯುಚ್ಛಕ್ತಿ ಮಂಡಲಿ ಸಾಲ ಎತ್ತುವ ಬಗ್ಗೆ.

ಶ್ರೀ ಜೆ.ಹೆಚ್. ಪಟೇಲ್ (ವಿದ್ಯುಚ್ಛಕ್ತಿ ಹಾಗೂ ಅಬಕಾರಿ ಮಂತ್ರಿ) ಅವರು.—

೧೯೪೯ನೇ ಇಸವಿಯ ವಿದ್ಯುಚ್ಛಕ್ತಿ ಸರಬರಾಜು ಶಾಸನದ(೧೯೪೯ನೇ ಇಸವಿಯ ಕೇಂದ್ರ ಶಾಸನ ೫೪ನೇ) ೬೫ (೩) ಕಲಮಿನ ಮೇರೆಗೆ, ಪರಮಾವಧಿ ಹಣವನ್ನು ಹತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಗೊತ್ತು ಮಾಡಲು ರಾಜ್ಯದ ವಿಧಾನಸಭೆಯಂ ಅನುಮತಿ ಪಡೆದುಕೊಳ್ಳುವುದು ಅವಶ್ಯಕವಾಗಿದ್ದು ಸದರಿ ಕಲಮಿನ (೧)ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಯಾವುದೇ ಕಾಲದಲ್ಲಾಗಲೀ ಸಾಲವಾಗಿ ಪಡೆದು ಕೊಳ್ಳಬಹುದಾಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಯಾವುದೇ ಕಾಲದಲ್ಲಿ ೧೫೦ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಪಡೆಯಬಹುದೆಂದು ರಾಜ್ಯ ಸರ್ಕಾರದವರ ಸಲಹೆಯನ್ನು ೨೭-೮-೭೪ರಂದು ಕರ್ನಾಟಕ ವಿಧಾನ ಸಭೆಯು ಅನುಮೋದಿಸಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರಂ ಯಾವುದೇ ಕಾಲದಲ್ಲಿ ಸದರಿ ಶಾಸನದ ೬೫ (೩) ಕಲಮಿನ ಮೇರೆಗೆ ೨೭-೮-೧೯೭೪ ರಿಂದ ೧೫೦ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಪಡೆಯಬಹು